ರಾಜ್ಯದಲ್ಲಿರುವ ಸರ್ಕಾರಿ ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸುವುದು

2880 - ಶ್ರೀ ಬಚ್ಚೇಗೌಡ ಬಿ.ಎನ್. (ಹೊಸಕೋಟೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಎಷ್ಟು ಸರ್ಕಾರಿ ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸಲು ವಿಶ್ವಬ್ಯಾಂಕಿನಿಂದ ಎಷ್ಟೆಷ್ಟು ಹಣ ಪಡೆಯಲಾಗಿದೆ?

ಆ) ವಿಶ್ವಬ್ಯಾಂಕಿನಿಂದ ಇದುವರೆವಿಗೆ ಬಿಡುಗಡೆ ಯಾಗಿರುವ ಹಣ ಎಷ್ಟು? ಈ ಆಸ್ಪತ್ರೆಗಳ ನಿರ್ಮಾಣ ಕಾರ್ಯ ಯಾವ ಹಂತದಲ್ಲಿವೆ?

ಇ) ಸರ್ಕಾರ ನಿರ್ಮಾಣ ಕಾರ್ಯ ಮುಗಿಸಲು ಏನಾದರೂ ಮಾರ್ಗಸೂಚಿ ಅನುಸರಿಸಿದೆಯೇ?

ಈ) ವಿಶ್ವಬ್ಯಾಂಕ್ ವಿಧಿಸಿರುವ ಷರತ್ತುಗಳಿಗೆ ಒಳಪಟ್ಟು ಯಾವುದೇ ಲೋಪವಿಲ್ಲದೆ ನಿರ್ಮಾಣ ಕಾರ್ಯ ನಡೆದಿದೆಯೇ?

ಡಾ॥ ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಕರ್ನಾಟಕ ಆರೋಗ್ಯ ಪದ್ಧತಿಗಳ ಅಭಿವೃದ್ಧಿ ಯೋಜನೆಯಡಿ ರೂ. 561.00 ಕೋಟಿ ವಿಶ್ವಬ್ಯಾಂಕ್ ನೆರವಿನಲ್ಲಿ ರಾಜ್ಯದ ಒಟ್ಟು 230 ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸಿ ಅಭಿವೃದ್ಧಿ ಪಡಿಸಲಾಗುತ್ತಿದೆ.

ಆ) ಇದುವರೆವಿಗೆ ವಿಶ್ವಬ್ಯಾಂಕ್ ಬಿಡುಗಡೆ ಮಾಡಿರುವ ಹಣ ರೂ. 254.82 ಕೋಟಿ. ಒಟ್ಟು 192 ಆಸ್ಪತ್ರೆಗಳ ಅಂದಾಜು ಮಂಜೂರಾಗಿದ್ದು 192 ಆಸ್ಪತ್ರೆಗಳ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ. ಇದುವರೆವಿಗೆ 60 ಆಸ್ಪತ್ರೆಗಳ ಕಾಮಗಾರಿ ಪೂರ್ಣಗೊಂಡಿದ್ದು ಉಳಿದ ಆಸ್ಪತ್ರೆಗಳ ಕಾಮಗಾರಿ ಪ್ರಗತಿಯಲ್ಲಿದೆ.

ಇ) ಗುತ್ತಿಗೆ ಮೊತ್ತವು ರೂ. 1.00 ಕೋಟಿಗಿಂತ ಕಡಿಮೆಯಿದಲ್ಲಿ ಕಾಮಗಾರಿ ಪ್ರಾರಂಭಿಸಿದ ದಿನಾಂಕದಿಂದ 12 ತಿಂಗಳ ಅವಧಿಯಲ್ಲಿ ಹಾಗೂ ರೂ. 1.00 ಕೋಟಿಗಿಂತ ಹೆಚ್ಚಾಗಿದ್ದಲ್ಲಿ 18 ತಿಂಗಳ ಅವಧಿಯಲ್ಲಿ ಪೂರ್ಣಗೊಳಿಸಲು ವಿಶ್ವಬ್ಯಾಂಕ್ ಮಾರ್ಗಸೂಚಿಯಿದ್ದು ಅದನ್ನು ಅನುಸರಿಸಲಾಗುತ್ತಿದೆ.

ಈ) ಹೌದು.

ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಸೀಟುಗಳನ್ನು ಹೆಚ್ಚಿಸುವುದು

2881 - ಶ್ರೀ ಬಚ್ಚೇಗೌಡ ಬಿ.ಎನ್. (ಹೊಸಕೋಟೆ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಸರ್ಕಾರಿ, ಅನುದಾನ ಮತ್ತು ಅನುದಾನ ರಹಿತ ಇಂಜಿನಿಯರಿಂಗ್ ಕಾಲೇಜುಗಳಿವೆ?

ಅ) ಈ ಕಾಲೇಜುಗಳಿಗೆ ಎಷ್ಟು ಪ್ರವೇಶ ಅವಕಾಶವನ್ನು ಈ ಹಿಂದೆ ಕಲ್ಪಿಸಲಾಗಿತ್ತು?

ಇ) 2000-2001ನೇ ಸಾಲಿನಲ್ಲಿ ರಾಜ್ಯಕ್ಕೆ ಹೆಚ್ಚುವರಿಯಾಗಿ ಎ.ಐ.ಸಿ.ಟಿ.ಇ. ಯಿಂದ ಪಡೆದಿರುವ ಸೀಟುಗಳ ಸಂಖ್ಯೆ ಎಷ್ಟು, ಮತ್ತು ಎಷ್ಟು ಕಾಲೇಜುಗಳಿಗೆ ಹೆಚ್ಚುವರಿ ಸೀಟು ಪಡೆಯಲು ಅವಕಾಶ ಮಾಡಲಾಗಿದೆ?

ಈ) ರಾಜ್ಯದ ವಿದ್ಯಾರ್ಥಿಗಳಿಗೆ ಈ ವರ್ಷ ಎಷ್ಟು ಹೆಚ್ಚು ಅವಕಾಶ ಸಿಕ್ಕಿರುವುದು?

ಉ) ಪ್ರತಿ ವರ್ಷ ಈ ಎಲ್ಲಾ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮುಗಿಸಿ ಹೊರಬರುವ ಇಂಜಿನಿಯರ್‌ಗಳ ಒಟ್ಟು ಸಂಖ್ಯೆ ಎಷ್ಟು? ಇಷ್ಟು ಇಂಜನಿಯರ್‌ಗಳಿಗೆ ಉದ್ಯೋಗ ಅವಕಾಶವಿದೆಯೇ?

ಡಾ|| ಬಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು) :

ಅ)	ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು	- 06
	ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳು	- 10
	ಅನುದಾನ ರಹಿತ ಇಂಜಿನಿಯರಿಂಗ್ ಕಾಲೇಜುಗಳು	- 64
		80

ಆ) 25,544

ಇ) 3,755 ಸೀಟುಗಳನ್ನು ಪಡೆಯಲಾಗಿದೆ 41 ಇಂಜಿನಿಯರಿಂಗ್ ಕಾಲೇಜುಗಳಿಗೆ.

ಈ) ಸುಮಾರು 1,803 ಸೀಟುಗಳು

ಉ) 9606

ಸೂಲಗಿತ್ತಿಯರ ವಾಸದ ಮನೆಗಳ ದುರುಪಯೋಗ

2882 - ಶ್ರೀ ಚೌಡರೆಡ್ಡಿ (ಚಿಂತಾಮಣಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಂತಾಮಣಿ ಕ್ಷೇತ್ರದ ಕಡಪದಲಮರಿ, ಕೋಟಗಲ್, ಶೆಟ್ಟಿಹಳ್ಳಿ ಮತ್ತು ಕೆಲವು ಗ್ರಾಮಗಳಲ್ಲಿ ಸೂಲಗಿತ್ತಿಯರ ವಾಸಕ್ಕಾಗಿ ಸರ್ಕಾರ ಮನೆಗಳನ್ನು ಕಟ್ಟಿಸಿ ಸೂಲಗಿತ್ತಿಯರನ್ನು ನೇಮಕ ಮಾಡಿ ಗರ್ಭಿಣಿ ಸ್ತ್ರೀಯರ ಹೆರಿಗೆಗೆ ಅನುಕೂಲ ಮಾಡಿಕೊಟ್ಟಿದ್ದು, ಈಗ ಈ ಸೂಲಗಿತ್ತಿಯರನ್ನು ಬೇರೆ ಕಡೆ ವರ್ಗ ಮಾಡಿದ್ದರಿಂದ ಖಾಲಿ ಬಿದ್ದಿರುವ ಸದರಿ ವಾಸದ ಕಟ್ಟಡಗಳು ದುರುಪಯೋಗ ಮತ್ತು ಶಿಥಿಲವಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಗ್ರಾಮಾಂತರ ಗರ್ಭಿಣಿ ಸ್ತ್ರೀಯರ ಕಲ್ಯಾಣಕ್ಕಾಗಿ ತೆಗೆದುಕೊಂಡ ಪರ್ಯಾಯ ಕ್ರಮ ಏನು?